## ಸಾಮರಸ್ಯದ ಬಣ್ಣಗಳು

ಬಣ್ಣಗಳಲ್ಲಿ ಪ್ರಾಥಮಿಕ ಬಣ್ಣ, ಸಾಮರಸ್ಯದ ಬಣ್ಣ, ಸಂಯೋಜಿತ ಬಣ್ಣ... ಹೀಗೆ ಹಲವು ವಿಧಗಳಿವೆ. ಹಳದಿ, ಕೆಂಪು ಮತ್ತು ನೀಲಿ ಬಟ್ಟೆಗಳಲ್ಲಿ ವರ್ಣಸಂಯೋಜನೆ ಮಾಡಲು ಸೂಕ್ತವಾದ ಪ್ರಾಥಮಿಕ ಬಣ್ಣಗಳು. ಇತರ 12 ಬಣ್ಣಗಳು ಮಿಶ್ರಣದಿಂದ ಬಂದುದಾಗಿರುತ್ತದೆ. ಉದಾಹರಣೆಗೆ: ಕೆಂಪು ಬಣ್ಣದ ಜೊತೆಗೆ ಹಳದಿ ಮಿಶ್ರ ಮಾಡಿದರೆ ಕಿತ್ತಳೆ ಬಣ್ಣ ಲಭ್ಯ. ನೇರಳೆ ಬಣ್ಣ ಪಡೆಯಲು ಕೆಂಪು ಜೊತೆಗೆ ನೀಲಿ ಮಿಶ್ರಣ ಮಾಡಬೇಕು. ಹಳದಿ ಬಣ್ಣದ ಜೊತೆಗೆ ನೀಲಿ ಸೇರಿಸಿದರೆ ಹಸಿರು ಬಣ್ಣ ಸಿಗುತ್ತದೆ. ನೇರಳೆ, ಕೆಂಪು, ಹಳದಿ, ಹಸಿರು, ನೀಲಿ ಬಣ್ಣಗಳ ಹಲವು ಛಾಯೆ (ಶೇಡ್) ಗಳ ಮೂಲಕ ಇನ್ನಷ್ಟು ಆಕರ್ಷಕ ಬಣ್ಣಗಳನ್ನು ಪಡೆದು ಸಂಯೋಜನೆ ಮಾಡಬಹುದು.

ಬಿಳಿ, ಕಪ್ಪು ಬಣ್ಣಗಳು ಯಾವುದೇ ಬಟ್ಟೆಯ ಜೊತೆಗೆ ಸುಲಭವಾಗಿ ಹೊಂದಾಣಿಕೆ ಮಾಡಿಕೊಳ್ಳುವಂಥವು. ಹೀಗಾಗಿ ಫ್ಯಾಬ್ರಿಕ್ಸ್‌ಗಳಲ್ಲಿ ಕಪ್ಪು, ಬಿಳಿ ಬಣ್ಣಗಳನ್ನು ಯಾವುದೇ ರೀತಿಯ ಕಾಂಬಿನೇಷನ್‌ಗಾಗಿಯೇ ಮೀಸಲಿಡಲಾಗುತ್ತದೆ.



ಕೂಡ ಸೇರಿಸಿಕೊಂಡು 'ಮಿಕ್ಸ್ ಅಂಡ್ ಮ್ಯಾಚ್' ಮಾಡಬಹುದು. ಪುರುಷರೂ ಟೀ ಶರ್ಟ್‌ಗಳಲ್ಲಿ ಕನ್ನಡ ನಾಣ್ಣುಡಿಗಳನ್ನು ಬರೆಸಿ ಧರಿಸಿಕೊಂಡು ಕನ್ನಡದ ಹೆಮ್ಮೆಯನ್ನು ಬಿಂಬಿಸಬಹುದು.

### ಯಾವುದು ಸೂಕ್ತ?

ಕೆಂಪು, ಹಳದಿ ಬಣ್ಣಗಳ ಸಲ್ವಾರ್ ತೊಡುವುದಾದರೆ ಫ್ಯಾಬ್ರಿಕ್ ಸಾಫ್ಟ್ ಆಗಿದ್ದರೆ ಸೂಕ್ತ. ಇದೇ ಬಣ್ಣಗಳ ಕಾಂಬಿನೇಷನ್‌ನಲ್ಲಿ ಕುರ್ತಿ ಧರಿಸಲು ಆಸಕ್ತಿ ಇದ್ದರೆ ಟಾಪ್ ಹಳದಿ ಹಾಗೂ ಬಾಟಮ್‌ಗೆ ಕೆಂಪು ಬಣ್ಣದ ಲೆಗ್ಗಿಂಗ್ ಸೂಕ್ತ. ಇದೇ ಬಣ್ಣಗಳನ್ನು ಉಲ್ಟಾದಲ್ಲಿ (ಕೆಂಪು ಟಾಪ್, ಹಳದಿ ಬಾಟಮ್) ಕೂಡ ಧರಿಸಬಹುದು.

ಕಿತ್ತಳೆ ಮಿಶ್ರಿತ ಕೆಂಪು ಬಣ್ಣ ಹಳದಿಯೊಂದಿಗೆ ಸರಿಯಾಗಿ ಹೊಂದುತ್ತದೆ. ರೇಷ್ಮೆ ಬಟ್ಟೆ ಆದರೆ ಹೊಳಪಿನ ಜೊತೆಗೆ ಇತರ ವರ್ಣ ಸಂಯೋಜನೆಯೂ ಆಕರ್ಷಕವಾಗಿದ್ದು, ಇದರಲ್ಲಿ ಥ್ರೆಡ್ ವರ್ಕ್, ಕುಂದನ್, ಚಮ್ಕಿ ಇರುವ ಡಿಸೈನ್ ಎಲಿಗೆಂಟ್ ಲುಕ್ ಕೊಡಲು ಸಹಕಾರಿ. ಈ ಬಟ್ಟೆ ತೊಡುವಷ್ಟೇ ಆಕ್ಸೆಸರೀಸ್ ಕೂಡ ಬಹಳ ಮುಖ್ಯ. ಮ್ಯಾಚಿಂಗ್ ಅಥವಾ ಕಾಂಟ್ರಾಸ್ಟ್ ಆದ ಕಿವಿಯೋಲೆ, ಮಿನುಗುವ ಮಣಿಮಾಲೆ ಧರಿಸಿದರೆ ಸಖತ್ ಆಗಿ ಮಿಂಚಬಹುದು.

### ವರ್ಣ ಸಂಯೋಜನೆ

ಫ್ಯಾಬ್ರಿಕ್‌ನಲ್ಲಿ ವರ್ಣ ಸಂಯೋಜನೆ ಮಾಡುವುದು ಒಂದು ವಿಜ್ಞಾನ. ಬಣ್ಣದ ಆಯ್ಕೆ ವ್ಯಕ್ತಿಯ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎನ್ನುತ್ತಾರೆ ಮನೋವಿಜ್ಞಾನಿಗಳು. ಹಳದಿ, ಕೆಂಪು ಮತ್ತು ಹಸಿರು ತಜ್ಞರ ಪ್ರಕಾರ ಬೆಚ್ಚಗಿನ ಬಣ್ಣಗಳು. ಕಡುಗೆಂಪು ಲೆಗ್ಗಿಂಗ್ ಮೇಲೆ ದಟ್ಟ ಹಳದಿ, ತಿಳಿಹಳದಿ ಬಣ್ಣದ ಟಾಪ್, ಕುರ್ತಿ, ಲಾಂಗ್ ಶರ್ಟ್ ಎಲ್ಲ ವೈವಿಧ್ಯಗಳೂ ಪ್ಲೆಸೆಂಟ್ ಲುಕ್ ಕೊಡಲು ಸಹಕಾರಿ ಎನ್ನುತ್ತಾರೆ ಫ್ಯಾಷನ್ ತಜ್ಞರು.

'ಕೆಂಪು ಬಣ್ಣ ಪ್ರೀತಿಯ ಸಂಕೇತ. ಕೆಂಪು ಗುಲಾಬಿ ಪ್ರೇಮಿಗಳ ಹೃದಯ ಬೆಸೆಯುವ ಸಾಧನ. ಈ ಬಣ್ಣ ಸೃಜನಾತ್ಮಕ, ಶಕ್ತಿ ಪ್ರಚೋದಕ. ಆರೋಗ್ಯದ ನಿಟ್ಟಿನಲ್ಲೂ ಕೆಂಪು ಪ್ರಮುಖ ಬಣ್ಣ. ಕೆಂಪು ರಕ್ತ ಕಣಗಳ ರಚನೆ ದೇಹ ನಿರ್ವಹಣೆಗೆ ಅತ್ಯಗತ್ಯ. ಕ್ರಿಸ್‌ಮಸ್ ಹಬ್ಬಕ್ಕೆ ಕೆಂಪು ಉಡುಗೆಯೇ ಪ್ರಧಾನ. ಹೀಗೆ ಕೆಂಪು ಬಣ್ಣವೂ ವಿವಿಧ ಬಣ್ಣಗಳೊಡಗೂಡಿ ಹಬ್ಬಗಳಿಗೆ, ಫ್ಯಾಷನ್‌ಗೆ ತನ್ನ ಸಂಬಂಧವನ್ನು ತಳುಕು ಹಾಕಿಕೊಂಡಿದೆ' ಎನ್ನುತ್ತಾರೆ 'ಕಲರ್ ಥಿಯರಿ'ಯಲ್ಲಿ ಪರಿಣತಿ ಸಾಧಿಸಿರುವ ವರ್ಣ ಸಂಯೋಜಕಿ ಬೆಂಗಳೂರಿನ ಮೈಥಿಲಿ ಭಾಗವತ್.

ಬಹು ಬಣ್ಣಗಳು, ಇವುಗಳ ಗುಣ ವಿಶೇಷಣಗಳು, ವೈಜ್ಞಾನಿಕ ನೆಲೆ, ವರ್ಣ ಸಂಯೋಜನೆ ಹಾಗೂ ಬಣ್ಣ–ದೇಹದ ಜೊತೆಗಿನ ಸಂಬಂಧದ ಬಗ್ಗೆ ಬೆಳಕು ಚೆಲ್ಲುವ ಮೈಥಿಲಿ ಅವರು, 'ಕೆಂಪು ಮಾತ್ರವಲ್ಲದೆ ಹಳದಿ, ನೀಲ, ಪಚ್ಚೆ, ಕಿತ್ತಳೆ, ಬೂದು ಮುಂತಾದ ಬಣ್ಣಗಳು ನಮ್ಮ ಜೀವನಶೈಲಿಯೊಂದಿಗೆ ನೈಜ ವಾಗಿಯೇ ಹೊಂದಿಕೊಂಡಿದೆ' ಎಂದು ಹೇಳುತ್ತಾರೆ.

'ಹಳದಿ ಮತ್ತು ಕೆಂಪು ಈಗೀಗ ಕನ್ನಡ ಬಣ್ಣ ಎಂದೇ ಬಿಂಬಿತವಾಗುತ್ತಿದೆ. ಹಳದಿ ಬಣ್ಣ ಆಧ್ಯಾತ್ಮಿಕ ಬೆಳವಣಿಗೆ ಸೂಚಕ ಬಣ್ಣ. ತಿಳಿ ಹಳದಿ ಮನಸ್ಸನ್ನು ಶಾಂತಿಯತ್ತ ಕೊಂಡೊಯ್ಯುತ್ತದೆ. ನೆಮ್ಮದಿ ನೀಡುತ್ತದೆ. ಹೀಗಾಗಿ ಶಾಲೆ, ವಿಶ್ವವಿದ್ಯಾಲಯ ಕಟ್ಟಡಗಳ ಗೋಡೆಗಳಿಗೆ ಹಳದಿ ಬಣ್ಣವನ್ನೇ ಬಳಿಯಲಾಗುತ್ತದೆ. ಮನೆಗಳಲ್ಲೂ ಮಕ್ಕಳ ಮಲಗುವ ಕೋಣೆಗೆ ಕಡುಹಳದಿ ಬಣ್ಣ ಸೂಕ್ತ. ಇದೇ ಬಣ್ಣ ಫ್ಯಾಷನ್ ಉಡುಪುಗಳಿಗೂ ಹೇಳಿ ಮಾಡಿಸಿದ್ದು' ಎನ್ನುವುದು ಇವರ ಅಭಿಮತ.

'ಕನ್ನಡ ಮಾಸ'ದ ನವೆಂಬರ್ ಸಂದರ್ಭದಲ್ಲಂತೂ ನುಡಿಪ್ರೇಮದ ಬಿಸುಪು ಮತ್ತಷ್ಟು ಹೆಚ್ಚುತ್ತದೆ. ಇದರೊಂದಿಗೆ ಫ್ಯಾಷನ್ ರಂಗವೂ ಕಳೆಗಟ್ಟುತ್ತದೆ. ನವೆಂಬರ್‌ನ ನಾದಲೀಲೆ ಫ್ಯಾಷನ್ ಜಗತ್ತಿನ ರಾಗರಂಗಿನೊಂದಿಗೆ ಅನನ್ಯ ಸಂಬಂಧದಿಂದೊಡಗೂಡಿ ಧನ್ಯತಾ ಭಾವವನ್ನೂ ಮೂಡಿಸುತ್ತದೆ.

